**ಓ ಎಸ್ ನಂಃ 325/2014**

**ಪಿ. ಡಬ್ಲ್ಯೂ ಃ 1**

**ದಿಃ 24.01.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಃ ಪ್ರತಿವಾದಿ 5 ಮತ್ತು 6 ರವರ ಪರ ಶ್ರೀ ಎ.ಎಸ್.ಎಸ್ ವಕೀಲರಿಂದ ಃ**

ದಾವಾ ಸ್ವತ್ತಿಗೆ ಸಂಬಂಧಿಸಿದಂತೆ 2/3 ಕೇಸ್ ಗಳಿವೆ. ಬೇರೆಯವರು 2 ಕೇಸ್ ಹಾಕಿದ್ದಾರೆ. ನಾವು ಹಾಕಿರುವ ಈ ಸ್ವತ್ತಿಗೆ ಸಂಬಂಧಿಸಿದ ಎಲ್ಲ ಕೇಸ್ ಗಳು ಒಂದೆ ನ್ಯಾಯಾಲಯದಲ್ಲಿ ನಡೆಯಬೇಕೆಂದು ನಾವು ಜಿಲ್ಲಾ ನ್ಯಾಯಾಲಯದಲ್ಲಿ ಅರ್ಜಿ ಕೊಟ್ಟಿದ್ದೇವು ಎಂದರೆ ಸರಿ. ಅದು ಏನಾಗಿದೆ ಎಂದು ನಾನು ತಿಳಿದುಕೂಂಡಿಲ್ಲ. ಕಳೆದ ಬಾರಿ ನನಗೆ ಕೆಲವು ದಾಖಲೆಗಳು ಸಿಕ್ಕಿರಲಿಲ್ಲ, ಅದಕ್ಕೆ ಅವುಗಳನ್ನು ಕೊಟ್ಟಿರಲಿಲ್ಲ. ನಂತರ ಅವುಗಳ ಪ್ರತಿಗಳನ್ನು ಪಡೆದು ಹಾಜರುಪಡಿಸಿದ್ದೇನೆ. ನನ್ನ ಸಾಕ್ಷಿ ವಿಚಾರಣೆ ಆಗುವ ಮೊದಲೇ ನಾನು ಕಳೆದ ಬಾರಿ ಹಾಜರುಪಡಿಸಿದ್ದ ದಾಖಲೆಗಳನ್ನು ಪಡೆದುಕೊಂಡಿದ್ದೇನೆ ಎಂದರೆ ಸಾಕ್ಷಿ ಇರಬಹುದು, ಸಿಕ್ಕಿರಲಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಆ ದಾಖಲೆಗಳನ್ನು ನಾನು ಇತ್ತೀಚೆಗೆ ನಾನು ಅರ್ಜಿ ಕೊಟ್ಟು ಪಡೆದಿದ್ದೇನೆ. ಆ ದಾಖಲೆಗಳನ್ನು ಬಹಳ ಹಿಂದೆ ಪಡೆದಿದ್ದೇನೆ ಎಂದರೆ ಸರಿಯಲ್ಲ.

ದಾವಾ ಸ್ವತ್ತು ಮೂಲತಃ ನರಸಿಂಹೇಗೌಡ ಇವರಿಗೆ ಸೇರಿದ ಸ್ವತ್ತು ಎಂದರೆ ಸರಿಯಲ್ಲ. ನಮ್ಮ ಅತ್ತೆ ಈರಮ್ಮ ಇವರ ತಂದೆ ನಾಗಣ್ಣ ಇವರಿಗೆ ಸೇರಿದ್ದಿರುತ್ತದೆ. ದಾವಾ ಸ್ವತ್ತುಗಳು ನಾಗಣ್ಣ ಇವರ ಪಿತ್ರಾರ್ಜಿತ ಸ್ವತ್ತುಗಳೆಂದರೆ ಸರಿಯಲ್ಲ. ನಾಗಣ್ಣ ಇವರ ಹೆಸರಿನಲ್ಲಿದ್ದ ಎಲ್ಲ ದಾಖಲೆಗಳನ್ನು ಕೊಟ್ಟಿದ್ದೇನೆ. ದಾಖಲೆಗಳು ಯಾವುವು ಎಂದು ಹೇಳಲು ಬರುವುದಿಲ್ಲ. ದಾವಾ ಸ್ವತ್ತುಗಳು ನಾಗಣ್ಣ ಇವರ ಪಿತ್ರಾರ್ಜಿತ ಸ್ವತ್ತುಗಳಲ್ಲ ಎಂದರೆ ಸರಿಯಲ್ಲ. ಅವುಗಳು ನರಸಿಂಹೇಗೌಡ ಇವರ ಪಿತ್ರಾರ್ಜಿತ ಸ್ವತ್ತುಗಳೆಂದರೆ ಸರಿಯಲ್ಲ. ಈ ವಿಷಯ ನನಗೆ ಗೊತ್ತಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಡ ನಿಂತಿದ್ದು ನರಸಿಂಹೇಗೌಡ ರ ಹೆಸರಿನಲ್ಲಿ ಎಂದರೆ ಸರಿಯಲ್ಲ. ನಾಗಣ್ಣ ನ ಹೆಸರಿನಲ್ಲಿ ಪಡ ನಿಂತಿದ್ದ ಬಗ್ಗೆ ಯಾವ ದಾಖಲೆಗಳನ್ನು ಕೊಟ್ಟಿದ್ದೇನೆ ಎಂದು ಹೇಳಲು ಆಗುವುದಿಲ್ಲ.

ನಾಗಣ್ಣ ಇವರ ಹೆಸರಿನಲ್ಲಿ ಇರುವ ಆಸ್ತಿಗಳನ್ನು ಪ್ರಶ್ನಿಸಿ ಆಸ್ತಿ ಹೊಡೆದುಕೊಳ್ಳಲು ಪ್ರಯತ್ನಿಸುತ್ತಿದ್ದೇವೆ ಎಂದರೆ ಸರಿಯಲ್ಲ. ಎ ಸಿ ಕೋರ್ಟ್ ಗೆ ನರಸೇಗೌಡ ಇವರು ಅಪೀಲು

ಹಾಕಿದ್ದರು.  ಅಲ್ಲಿ ಸಿವಿಲ್ ಕೋರ್ಟ್ ನಲ್ಲಿ ಬಗೆಹರಿಸಿಕೊಳ್ಳಿ ಎಂದು ಆದೇಶವಾಗಿದೆ. ಅದರ ವಿರುದ್ಧ ನಾವು ಹೈಕೋರ್ಟ್ ನಲ್ಲಿ ರಿಟ್ ಹಾಕಿದ್ದೇವು. ನಂತರ ಪುನರ್ ಪರಿಶೀಲಿಸಲು ತಹಶೀಲ್ದಾರ್ ರವರಿಗೆ ಕಡತ ವಾಪಸ್ ಕಳುಹಿಸಿದ್ದಾರೆ.  ಹಿಂದೆ ಈರಮ್ಮ ಇವರ ಹೆಸರಿನಲ್ಲಿದ್ದ ದಾಖಲೆಗಳು ಸರಿಯಾಗಿವೆ ಎಂದು ತಹಶೀಲ್ದಾರ್ ರವರು ಆದೇಶ ಮಾಡಿದ್ದರು.  ಹೈಕೋರ್ಟ್ ನಲ್ಲಿ ದಾಖಲೆಗಳನ್ನು ಯಾವುದೆ ರೀತಿ ಬದಲಾವಣೆ ಮಾಡಬಾರದು, ಎ ಸಿ ಆದೇಶದ ಮೇರೆಗೆ ಸಿವಿಲ್ ನ್ಯಾಯಾಲಯದಲ್ಲಿ ಏನು ತೀರ್ಮಾನವಾಗುತ್ತದೆ, ಆ ಪ್ರಕಾರ ನಡೆದುಕೊಳ್ಳಬೇಕೆಂದು ಆದೇಶವಾಗಿತ್ತು ಎಂದರೆ ಸರಿಯಲ್ಲ.

ಓ ಎಸ್ 152/2004 ರಲ್ಲಿ ನಾನು ಪಾರ್ಟಿ ಇದ್ದೇನು. ನಂತರ ನನ್ನ ವಿರುದ್ಧ ದಾವೆ ವಜಾ ಆಗಿದೆ.  ನಾನು ಆ ದಾವೆಯಲ್ಲಿ ಪಾರ್ಟಿ ಇರಲಿಲ್ಲ ಎಂದರೆ ಸರಿಯಲ್ಲ.  ಆ ದಾವೆಯಲ್ಲಿ ನಮ್ಮ ಹಿಂದಿನ ವಕೀಲರಾದ ಸುರೇಶ ರವರನ್ನು ಕೇಳಿದ್ದೇವು, ವಾದಿಗಳೇ ಅವರ ಕೇಸ್‌ನ್ನು ವಾಪಸ್ ತೆಗೆದುಕೊಂಡಿದ್ದಾರೆ , ಇರಲಿ ಬಿಡು ಎಂದು ಹೇಳಿದ್ದರು.  ಓ ಎಸ್ 80/2005 ರಲ್ಲಿ ಸಹ ನಾನು ಪಾರ್ಟಿ ಇದ್ದೇನು. ನಂತರ ನನ್ನ ವಿರುದ್ಧ ಕೇಸ್ ವಜಾ ಮಾಡಿಸಿಕೊಂಡಿದ್ದಾರೆ. ಪುಟ್ಟೇಗೌಡ ಇವರು ದಾವಾ ಸ್ವತ್ತಿನಲ್ಲಿ ಭಾಗ ಬರಬೇಕೆಂದು ಓ ಎಸ್ 80/2005 ಎನ್ನುವ ದಾವೆ ಮಾಡಿದ್ದರು.  ಆ ಎರಡೂ ದಾವೆಗಳು ವಾದಿಗಳು ನ್ಯಾಯಾಲಯಕ್ಕೆ ಬರದೇ ವಜಾ ಆಗಿರುತ್ತವೆ. ಆ ಎರಡು ದಾವೆಗಳು ವಜಾವಾದ ನಂತರ  ಅರ್ಜಿ ಕೊಟ್ಟು ನಾನು ಮುಂದುವರೆಸಲು ಪ್ರಯತ್ನ ಮಾಡಿಲ್ಲ. ನಾನು ಕಳೆದ ಬಾರಿ ಹಾಜರುಪಡಿಸಿದ ದಾಖಲೆಗಳು ದಾವಾ ಸ್ವತ್ತಿಗೆ ಸಂಬಂಧಿಸಿದ್ದರೂ ಅದರ ಬಗ್ಗೆ ಯಾವುದೆ ಸ್ಪಷ್ಟ ಆದೇಶವಿಲ್ಲದ ನ್ಯಾಯಾಲಯದ ದಾಖಲೆಗಳನ್ನು ಕೇಸ್ ವಿಳಂಬ ಮಾಡಲು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.  ಪ್ರತಿವಾದಿ 1 ರವರ ವಾರಸುದಾರರಿಗೆ ಭಾಗದ ಹಕ್ಕನ್ನು ತಪ್ಪಿಸುವ ಉದ್ದೇಶದಿಂದ ನಿ ಪಿ 84 ನ್ನು ಸೃಷ್ಟಿಸಿ ಹಾಜರುಪಡಿಸಿದ್ದೇವೆ ಎಂದರೆ ಸರಿಯಲ್ಲ.

**ಉಳಿದ ಪ್ರತಿವಾದಿಗಳ ಪರವಾಗಿ ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,

ಮಾಗಡಿ.